**<u>ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲೆ ಆದೇಶ</u>**

ಡಿಕ್ರಿದಾರರ ಪರ ವಕೀಲರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 18(ಎ) ಸಹವಾಚಕ ಕಲಂ 151 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ತೀರ್ಪುಋಣಿದಾರು ಡಿಕ್ರಿಯಲ್ಲಿ ಹೇಳಿರುವಂತೆ ನೊಂದಾಯಿತ ಕ್ರಯಪತ್ರ ಮಾಡಿಕೊಡದ ಕಾರಣ ನ್ಯಾಯಾಲಯವು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ನೊಂದಾಯಿತ ಕ್ರಯಪತ್ರ ಮಾಡಿಕೊಡುವಂತೆ ಕೋರಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ 1 ರ ಜೊತೆಗೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ಡಿಕ್ರಿದಾರರು ಅಸಲು ದಾವೆ 587/2020 ರಂತೆ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಿನಾಂಕಃ25.02.2018, 01-03-2018, 05.03.2018, 28.04.2018, 30.05.2018, 19.06.2018 ಮತ್ತು 20.06.2018 ರಂತೆ ಕ್ರಯದ ಕರಾರುಪತ್ರಗಳ ನಿರ್ಧಿಷ್ಟ ನೆರವೇರಿಕೆಯ ಪರಿಹಾರ ಪಡೆಯಲು ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯು ಅಂತಿಮವಾಗಿ ದಿನಾಂಕಃ08.10.2021 ರಂದು ಡಿಕ್ರಿಯಾಗಿರುತ್ತದೆ. ನ್ಯಾಯಾಲಯವು ಡಿಕ್ರಿಯ ದಿನಾಂಕದಿಂದ ಮೂರು ತಿಂಗಳ ಅವಧಿಯ ಒಳಗಾಗಿ ಪ್ರತಿವಾದಿಯರು ವಾದಿಯ ಪರವಾಗಿ ಡಿಕ್ರಿಯಂತೆ ನೊಂದಾಯಿತ ಕ್ರಯಪತ್ರ ಬರೆದುಕೊಡುವಂತೆ ಆದೇಶಿಸಲಾಗಿದೆ. ಒಂದು ವೇಳೆ ಪ್ರತಿವಾದಿಯರು ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡದೆ ಇದ್ದ ಪಕ್ಷದಲ್ಲಿ ವಾದಿಯು ಕಾನೂನು ಪ್ರಕಾರ ನೊಂದಣಿ ಕ್ರಯಪತ್ರ ಮಾಡಿಸಿಕೊಳ್ಳಲು ಅರ್ಹರಿರುತ್ತಾರೆ. ಆದರೆ ಪ್ರತಿವಾದಿಯರ ಡಿಕ್ರಿಯನ್ನು ಪಾಲನೆ ಮಾಡದೆ ಇರುವುದು ಮೆಲ್ನೂಟಕ್ಕೆ ಕಂಡುಬರುತ್ತದೆ. ಅಮಲ್ಜಾರಿ ಅರ್ಜಿ ಸಲ್ಲಿಸಿದ ನಂತರ ತೀರ್ಪುಋಣಿದಾರರಿಗೆ ನೋಟೀಸ್ ನೀಡಿದ್ದು, ಸದರಿ ನೊಟೀಸ್ ಜಾರಿಯಾಗಿದ್ದರೂ ಸಹ ಹಾಜರಾಗಿರುವುದಿಲ್ಲ. ಕಾರಣ ಎದುರುದಾರರ ಪರವಾಗಿ

ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ಕ್ರಯಪತ್ರವನ್ನು ಮಾಡಿಕೊಡುವಂತೆ ಕೋರಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ಡಿಕ್ರಿದಾರರು ತೀರ್ಪು ಋಣಿದಾರರ ವಿರುದ್ದ ಅಸಲು ದಾವೆ 587/2020 ರಂತೆ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯು ದಿನಾಂಕಃ08.10.2021 ರಂದು ಡಿಕ್ರಿಯಾಗಿ ಪ್ರತಿವಾದಿಗಳಿಗೆ ನೊಂದಾಯಿತ ಕ್ರಯಪತ್ರ ಮಾಡಿಕೊಡುವಂತೆ ಆದೇಶಿಸಿರುವುದು ಕಂಡುಬಂದಿರುತ್ತದೆ.

ಕ್ರಮಾದೇಶ 21 ನಿಯಮ 32(5) ರ ಪ್ರಕಾರ ಕರಾರು ನಿರ್ಧಿಷ್ಟ ಪಾಲನೆಗಾಗಿ ಮಾಡಿದ ಡಿಕ್ರಿ ಪ್ರಕಾರ ನಡೆದುಕೊಳ್ಳದಿದ್ದಲ್ಲಿ ತೀರ್ಪುಋಣಿಯ ಖರ್ಚಿನಲ್ಲಿ ಡಿಕ್ರಿದಾರನು ತಾನೇ ಅಥವಾ ನ್ಯಾಯಾಲಯವು ನೇಮಕ ಮಾಡಿದ ಇತರ ಯಾವುದೇ ವ್ಯಕ್ತಿಯು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಮಾಡಬೇಕೆಂದು ನ್ಯಾಯಾಲಯವು ನಿರ್ದೇಶಿಸಬಹುದು ಎಂಬುದಾಗಿ ತಿಳಿಸಿರುತ್ತದೆ. ಪ್ರಸ್ತುತ ಅರ್ಜಿಯಲ್ಲಿ ತೀರ್ಪುಋಣಿದಾರರು ಡಿಕ್ರಿಯಪ್ರಕಾರ ನಡೆದುಕೊಂಡಿರುವುದಿಲ್ಲ. ಆದ್ದರಿಂದ ತೀರ್ಪುಋಣಿಯರ ಪರವಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ಡಿಕ್ರಿಯನ್ನು ಕಾರ್ಯಗತಗೊಳಿಸದಿದ್ದಲ್ಲಿ ಅರ್ಜಿದಾರರಿಗೆ ತುಂಬಾ ನಷ್ಟ ಉಂಟಾಗುತ್ತದೆ ಆದ್ದರಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸುವುದು ಸೂಕ್ತವೆನಿಸುತ್ತದೆ.ಆದ್ದರಿಂದ ಈ ಕೆಳಕಂಡಂತೆ ಆದೇಶ.

**ಃಆದೇಶಃ**

ಡಿಕ್ರಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಿಲಾಗಿದೆ.

ಡಿಕ್ರಿದಾರರ ಪರ ಕ್ರಯಪತ್ರ ನೊಂದಣಿ ಮಾಡಿಕೊಡಲು ನ್ಯಾಯಾಲಯದ ಮುಖ್ಯ ಲಿಪಿಖಾಧಿಕಾರಿರವರನ್ನು ನ್ಯಾಯಾಲಯದ ನಿಯೋಗಿಯನ್ನಾಗಿ ನೇಮಕ ಮಾಡಲಾಗಿದೆ.

ಸದರಿಯವರು ತೀರ್ಪುಋಣಿದಾರರ ಪರವಾಗಿ ಡಿಕ್ರಿದಾರರಿಗೆ ನೊಂದಾಯಿತ ಕ್ರಯಪತ್ರ ಮಾಡಿಕೊಡುವಂತೆ ಸೂಚಿಸಲಾಗಿದೆ.

ಡಿಕ್ರಿದಾರರು ನ್ಯಾಯಾಲಯದ ನಿಯೋಗಿ ಶುಲ್ಕವಾಗಿ ರೂ. 1,500/- ತುಂಬಲು ಆದೇಶಿಸಲಾಗಿದೆ.

ಕ್ರಮಕ್ಕಾಗಿ ದಿನಾಂಕ 01.10.2022 ಕ್ಕೆ ಕರೆಯಲಾಗುವುದು.

Sd/-

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ನ್ಯಾಯಾಲಯ ಕಡೂರು.**